(ಸಿ) ಕಳಸ ಹೋಬಳಿ ಹೊರನಾಡು ಗ್ರಾಮದಿಂದ ಹೂವಿನಿತ್ತಲು ತೋಟದ ಮಾರ್ಗವಾಗಿ ಯಗ್ಚರೆ ಖಾನಕವನಳ್ಳಿ ಮಾರ್ಗವಾಗಿ ಬಸರಿಕಟ್ಟೆ ರೋಡಿಗೆ ಹೋಗಲು ರಸ್ತೆ—ಸಿಮ್ಮೆಲ್ಲಿ.

(ಟಿ) ಕಳಸ ಹೋಬಳಿ ಹಿರೆಬೈಲ್ ಗ್ರಾಮದಿಂದ ಇಡಕಣಿ ಗ್ರಾಮದ ಮಾರ್ಗವಾಗಿ ಗಬಗಲ್ಲಿಗೆ ಹೋಗಲು ರಸ್ತೆ—ಳಿ ಮೈಲಿ.

(ಎ) ಮೂಡಿಗೆರೆ ತಾಲೂಕು ಬಣ್ಕಲ್ ಹೋಬಳಿ, ಬಣ್ಕಲ್ ಹೆಗ್ಗೂಡಲು ರಸ್ತೆ ಹೆಗ್ಗೂಡಲು ಕಾಫಿ ಎಸ್ಟೇಟಿನಿಂದ ಬನಣಿ ಮಾರ್ಗವಾಗಿ ಸಾರಗೋಡು ಗ್ರಾಮಕ್ಕೆ ಹೋಗಲು ಹೊಸ ರಸ್ತೆ.

Sri H. M. CHANNABASAPPA (Minister for Public Works).—

(a) Yes, except the road mentioned at Sl. No. 3, which is a Taluka Board Road.

ಮೂಡಿಗೆರೆ ಬೈದುವಳ್ಳಿ ಪಿ. ಡಬ್ಲ್ಯೂ. ಡಿ. ರಸ್ತೆಯನ್ನು ದುರಸ್ತಿ ಮಾಡುವುದು

೮. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ)—

ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಮೂಡಿಗೆರೆ ಬೈದುವಳ್ಳಿ ಪಿ. ಡಬ್ಲ್ಯೂ. ಡಿ. ರಸ್ತೆಯು ಇತ್ತೀಚಿನ ಭಾರಿ ಮಳೆಯಿಂದಾಗಿ ಕೊರಕಲು ಬಿದ್ದು ಒನ್ಲೇ ಮತ್ತು ಒನ್ಲೇ ಮೈಲಿಯ ರಸ್ತೆಯು ನಾದುರಸ್ತಾಗಿ ಜನ ಜಾನುವಾರುಗಳ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

(ಆ) ಹಾಗಿದ್ದರೆ ಈ ರಸ್ತೆಯನ್ನು ದುರಸ್ತಿ ಮಾಡಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳು).—

(ಅ) ಬಂದಿದೆ.

(ಆ) ಈ ರಸ್ತೆಯ ತಾತ್ಕಾಲಿಕ ದುರಸ್ತಿ, ನಿರ್ವಹಣೆಯನ್ನು ರಸ್ತೆಯ ಗ್ಯಾಂಗ್ ಕೂಲಿಗಳ ಮುಖಾಂತರ ನಿರ್ವಹಿಸಲಾಗುತ್ತಿದೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿ ಕೊಳ್ಳಲಾಗುತ್ತಿದೆ.

ಮೂಡಿಗೆರೆ ತಾಲೂಕು ಕಳಸಾ ಹೋಬಳಿ ಹೊರನಾಡು ಗ್ರಾಮದ ಉಪಾಧ್ಯಾಯರಿಗೆ ವಾಸದ ಮನೆಗಳನ್ನು ಕಟ್ಟಿಸುವುದು

9. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ)—ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಮೂಡಿಗರೆ ತಾಲೋಕು ಕಳಸಾ ಹೋಬಳಿ ಹೊರನಾಡು ಗ್ರಾಮದ ಶಾಲಾ ಉಪಾಧ್ಯಾಯರಿಗೆ ವಾಸದ ಮನೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಇವರಿಗೆ ವಾಸದ ಮನೆಯನ್ನು ಕಟ್ಟಿಸಲು ಸರ್ಕಾರದವರು ಹಣ ಮಂಜೂರು ಮಾಡಲು ಉದ್ದೇಶಿಸಿದ್ದಾರೆಯೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಶಿಕ್ಷಣ ಮಂತ್ರಿಗಳು).—

(ಅ) ಇಲ್ಲ.

(ಆ) ಇಲ್ಲ.